ಓಂ ಶಾಂತಿ, ಬಾಪ್ ದಾದಾ, ಅವ್ಯಕ್ತ ಮುರಳಿ 26-03-1970

***<u>ಮಹಾರಥಿಯ ಗುಣ ಮತ್ತು ಲಕ್ಷಣಗಳು</u>*** (महारथी – पन के गुण और कर्तव्य)

ಇಂದು ಮಾತನಾಡಬೇಕೋ ಅಥವಾ ಮಾತಿನಿಂದ ದೂರ ಹೋಗಬೇಕೋ? ಮಾತಿನಿಂದ ದೂರ ಹೋಗುವ ಸ್ಥಿತಿ ಚೆನ್ನಾಗಿದೆಯೋ ಅಥವಾ ಮಾತನಾಡುವುದು ಚೆನ್ನಾಗಿದೆಯೋ? (ಎರಡೂ). ಯಾವುದು ಹೆಚ್ಚು ಚೆನ್ನಾಗಿದೆ? ಮಾತನಾಡುತ್ತಿದ್ದರೂ ಮಾತಿನಿಂದ ಅತೀತ ಸ್ಥಿತಿಯಲ್ಲಿ ಇರಲು ಸಾಧ್ಯವೇ? ಅಥವಾ ಮಾತನಾಡದಿದ್ದಾಗ ಮಾತ್ರ ಅತೀತ ಸ್ಥಿತಿಯಾಗುತ್ತಿದೆಯೇ? ಸಾಧ್ಯವಾದರೆ, ಅದು ಯಾವಾಗ? ಈ ಸ್ಥಿತಿಯಲ್ಲಿ ಸ್ಥಿತರಾಗಲು ಎಷ್ಟು ಸಮಯ ಬೇಕು? ಈಗ ಸಾಧ್ಯವೇ ಅಥವಾ ಕೆಲವು ತಿಂಗಳು ಅಥವಾ ವರ್ಷಗಳು ಬೇಕೆ? ಅಭ್ಯಾಸ ಈಗಲೇ ಆರಂಭವಾಗಬಹುದಾ ಅಥವಾ ಕಾರ್ಯ ವ್ಯವಹಾರದಲ್ಲಿ ಆಗುವುದಿಲ್ಲವಾ? ಒಂದು ವೇಳೆ ಆಗುತ್ತದೆ ಎಂದರೆ ಈಗಿನಿಂದಲೇ ಸಾಧ್ಯವೇ? ಯಾರು 'ಮಹಾರಥಿ' ಎಂದು ಕರೆಸಿಕೊಳ್ಳುತ್ತಾರೋ ಅವರ ಅಭ್ಯಾಸ ಮತ್ತು ಪ್ರತ್ಯಕ್ಷತೆ (ಪ್ರಯೋಗ) ಜೊತೆಜೊತೆಗೆ ಇರಬೇಕು. ಅಭ್ಯಾಸ ಮಾಡಿದಾಗ ಪ್ರಯೋಗದಲ್ಲಿ ಬರುವುದೇ ಮಹಾರಥಿಗಳ ಲಕ್ಷಣವಾಗಿದೆ. ಕುದುರೆ ಸವಾರರು ಅಭ್ಯಾಸ ಮಾಡಿದ ಮೇಲೆ ಪ್ರಯೋಗದಲ್ಲಿ ತರುತ್ತಾರೆ ಮತ್ತು ಕಾಲಾಳುಗಳು, ಯೋಜನೆಗಳನ್ನೇ ಮಾಡುತ್ತಿರುತ್ತಾರೆ. ಈ ಅಂತರವಿರುತ್ತದೆ. ಗಮನವಿದೆ, ಅಭ್ಯಾಸದಲ್ಲಿ ತರುವೆವು ಎಂಬ ಶಬ್ದವೂ ಸಹ ಮಕ್ಕಳ ಬಾಯಿಂದ ಬರಬಾರದು. ಈಗ ಆ ಸ್ಥಿತಿಯೂ ಹೋಯಿತು. ಈಗಂತೂ ಸಂಕಲ್ಪದಂತೆ ಕರ್ಮವಾಗಬೇಕು. ಸಂಕಲ್ಪ ಮತ್ತು ಕರ್ಮದಲ್ಲಿ ಅಂತರವಾಗಬಾರದು, ಅವು ಈಗ ಬಾಲ್ಯದ ಮಾತಾಗಿವೆ. ಸಂಕಲ್ಪ ಮಾಡುವ, ಯೋಜನೆಗಳನ್ನು ಮಾಡುವ ಮತ್ತು ಅದರಂತೆ ನಡೆಯುವ ದಿನಗಳು ಈಗಿಲ್ಲ. ಈಗ ಅಧ್ಯಯನ ಎಲ್ಲಿಯವರೆಗೆ ಬಂದಿದೆ? ಈಗಂತೂ ಕೊನೆಯ ಸ್ಥಿತಿಯಲ್ಲಿದೆ. ಮಹಾರಥಿಯ ಗುಣ ಮತ್ತು ಕರ್ತವ್ಯ ಏನು ಎಂಬುದರ ಕಡೆಗೆ ಗಮನವಿರಬೇಕು. ಇಂದು ಅದನ್ನೇ ಹೇಳಲು ಮತ್ತು ಅಂತಿಮ ಸ್ಥಿತಿಯ ಸ್ವರೂಪದ ಸಾಕ್ಷಾತ್ಕಾರ ಮಾಡಿಸಲು ಬಂದಿರುವೆವು. ಸೇವಾಧಾರಿಗಳು ಏನನ್ನು ಮಾಡಬಹುದು, ಏನನ್ನು ಮಾಡಬಾರದು, ಏನನ್ನು ಹೇಳಬಹುದು, ಏನನ್ನು ಹೇಳಬಾರದು ಎಂಬುದನ್ನು ಈಗಿನಿಂದಲೇ ಧಾರಣೆ ಮಾಡುವುದರಿಂದ ಅಂತಿಮ ಮೂರ್ತಿಯಾಗುವರು, ಸಾಕಾರದ ಪ್ರತ್ಯಕ್ಷ ಪ್ರಮಾಣವನ್ನು ನೋಡಿದಿರಿ, ಅಭ್ಯಾಸ ಮತ್ತು ಪ್ರಯೋಗ ಒಂದೇ ಸಮಾನವಾಗಿತ್ತಾ ಅಥವಾ ಬೇರೆ ಬೇರೆಯಾಗಿತ್ತಾ? ವಿಚಾರವಿದ್ದಂತೆ ಕರ್ಮವಿತ್ತು. ಅನುಸರಿಸುವುದು ಮಕ್ಕಳ ಕರ್ತವ್ಯವಾಗಿದೆ, ಹೆಜ್ಜೆಯ ಮೇಲೆ ಹೆಜ್ಜೆಯಿಡುವುದು. ಪೂರ್ತಿ ಅನುಸರಿಸುವುದು ಎಂದರೆ ಹೆಜ್ಜೆಯ ಮೇಲೆ ಹೆಜ್ಜೆಯನ್ನು ಇಡುವುದಾಗಿದೆ. ಹೇಗಿದ್ದರೂ ಹಾಗೆಯೇ ಅನುಸರಿಸಬೇಕು. ಆ ಸ್ಥಿತಿ ಯಾವಾಗ ಬರುವುದು? ಮಹಾರಥಿಗಳ ಮುಖದಿಂದ ಯಾವಾಗ ಎಂಬ ಶಬ್ದವೇ ಬರುವುದಿಲ್ಲ. ಮಾಡಿ ತೋರಿಸುತ್ತೇವೆ ಎಂಬುದು ಒಂದಾದರೆ, ಆಗಲಿ ಮಾಡುತ್ತೇವೆ, ಯೋಚಿಸುತ್ತೇವೆ ಎಂಬುದು ಮತ್ತೊಂದಾಗಿದೆ. ವಿಶ್ವಾಸವಿದ್ದವರ ಮಾತು ಈ ರೀತಿಯಿರುವುದಿಲ್ಲ. ಸಾಹಸವಿದೆ ಆದರೆ ವಿಶ್ವಾಸವಿಲ್ಲ. ವಿಶ್ವಾಸದ ಅರ್ಥವೇ ಆಗಿದೆ ನಿಶ್ಚಯಬುದ್ಧಿ, ಮನ, ವಚನ, ಕರ್ಮದಲ್ಲಿ ನಿಶ್ಚಯಬುದ್ಧಿ, ಕೇವಲ ಜ್ಞಾನ ಮತ್ತು ತಂದೆಯ ಪರಿಚಯಕ್ಕಷ್ಟೇ ನಿಶ್ಚಯಬುದ್ಧಿ ಸೀಮಿತವಲ್ಲ ಆದರೆ ಅವರ ಸಂಕಲ್ಪವೂ, ಮಾತೂ ನಿಶ್ಚಯದ್ದಾಗಿರುವುದು, ಎಂದಿಗೂ ಯಾವುದೇ ಮಾತು ಸಾಹಸ ಹೀನವಾಗಿರುವುದಿಲ್ಲ. ಅವರನ್ನು ಮಹಾರಥಿಯೆಂದು ಹೇಳಲಾಗುತ್ತದೆ. ಮಹಾರಥಿಯ ಅರ್ಥವೇ ಆಗಿದೆ ಮಹಾನ್.

ಪರಸ್ಪರರಲ್ಲಿ ಯಾವ ಯಾವ ಯೋಜನೆಗಳನ್ನು ಮಾಡಿರುವಿರಿ? ಹೊಸ ಪ್ರಪಂಚದ ಯೋಜನೆ ನಿಜವಾಗುವಂತಹ ಯೋಜನೆ ಮಾಡಿರುವಿರಾ? ಹೊಸ ಜಗತ್ತಿನ ಯೋಜನೆ ನಿಜವಾಗುವುದು ಎಂದರೆ ಹಳೆಯ ಪ್ರಪಂಚದ ಯಾವುದೇ ಮಾತು ಮತ್ತೊಮ್ಮೆ ಪ್ರಯೋಗದಲ್ಲಿ ಬರಬಾರದು. ಯೋಜನೆಗಳು ಬಹಳಷ್ಟು ಮಾಡಲ್ಪಡುತ್ತವೆ ಆದರೆ ಅವುಗಳನ್ನು ಪ್ರಯೋಗದಲ್ಲಿ ನೋಡಬೇಕು ಎಂದು ಎಲ್ಲಾ ಜನ ಹೇಳುತ್ತಾರೆ. ಕೆಲವರು ಮನದಿಂದ ಹೇಳುತ್ತಾರೆ, ಕೆಲವರು ಮಾತಿನಿಂದ ಹೇಳುತ್ತಾರೆ. ಆದರೆ ಈ ಸಂಕಲ್ಪವು ಸದಾಕಾಲಕ್ಕೆ ದೂರವಾಗಬೇಕು, ಇದು ಮಹಾರಥಿಯ ಕೆಲಸವಾಗಿದೆ. ಎಲ್ಲರ ದೃಷ್ಟಿ ಈಗಲೂ ಮಧುಬನದ ವಿಶೇಷ ಮುಖ್ಯ ರತ್ನಗಳ ಮೇಲಿದೆ, ಅವರ

ದೃಷ್ಟಿಯಲ್ಲಿ ಆ ತಮ್ಮ ಬದಲಾದ ದೃಷ್ಟಿಕೋನ ಅವರಿಗೆ ಕಂಡುಬರಬೇಕು. ಈಗ ಆ ಹಳೆಯ ದೃಷ್ಟಿ, ವೃತ್ತಿ ಇಲ್ಲ. ಆಗ ಅಂತಿಮ ನಗಾರಿ ಮೊಳಗುವುದು, ಈ ಸಂಘಟನೆ ಸಾಮಾನ್ಯವಾದುದಲ್ಲ, ಇದು ಅದ್ಭುತವಾದ ಸಂಘಟನೆಯಾಗಿದೆ. ಈ ಸಂಘಟನೆಯಿಂದ ಎಲ್ಲರಿಗೂ ಸಾಕ್ಷಾತ್ ಬಾಪ್ ದಾದಾರ ಮಾತಿನ ಅನುಭವವಾಗುವಂತಹ ಸ್ವರೂಪವಾಗಿ ಹೋಗಬೇಕು. ಬಾಪ್ ದಾದಾರ ಸಂಸ್ಕಾರ ಎಲ್ಲಾರ ಸಂಸ್ಕಾರಗಳಲ್ಲಿ ಕಂಡುಬರಬೇಕು, ತಮ್ಮ ಸಂಸ್ಕಾರಗಳಲ್ಲ. ಎಲ್ಲಾ ಸಂಸ್ಕಾರಗಳನ್ನು ದೂರ ಮಾಡಿ ಯಾವ ಸಂಸ್ಕಾರ ತುಂಬಿಕೊಳ್ಳಬೇಕು? (ಬಾಪ್ ದಾದಾರ), ಎಲ್ಲಾರಿಗೂ ಇವರು ಸಾಕ್ಷಾತ್ ಬಾಪ್ ದಾದಾ ಆಗಿ ಹೋಗಿದ್ದಾರೆ ಎಂಬ ಸಾಕ್ಷಾತ್ಕಾರವಾಗಲಿ, ಈ ರೀತಿ ಎಲ್ಲರಿಗೂ ಮಾಡಿಸಬೇಕು. ಯಾವುದೇ ಹಳೆಯ ಸಂಕಲ್ಪ ಅಥವಾ ಸಂಸ್ಕಾರ ಎದುರಿಗೆ ಬರದಿರಲಿ. ಮೊದಲು ಇದು ಬಾಪ್ ದಾದಾರ ಸಂಸ್ಕಾರವೋ ಅಲ್ಲವೋ ಎಂದು ತುಲನೆ ಮಾಡಿನೋಡಬೇಕು ಇಲ್ಲವಾಗಿದ್ದರೆ ಆ ಸಂಸ್ಕಾರಗಳನ್ನು ಸ್ಪರ್ಶ ಮಾಡಬೇಡಿ. ಬುದ್ಧಿಯಲ್ಲಿ ಸಂಕಲ್ಪ ರೂಪದಲ್ಲಿಯೂ ಸ್ಪರ್ಶವಾಗಬಾರದು, ಕ್ರಿಮಿನಲ್ ವಸ್ತುಗಳನ್ನು ಹೇಗೆ ಸ್ಪರ್ಶ ಮಾಡುವುದಿಲ್ಲವೋ, ಹಾಗೆಯೇ ಬಾಪ್ ದಾದಾರ ಸಮಾನ ಸಂಸ್ಕಾರಗಳಿಲ್ಲದಿದ್ದರೆ ಆ ಸಂಸ್ಕಾರಗಳನ್ನೂ ಸ್ಪರ್ಶ ಮಾಡಬೇಡಿ. ನಿಯಮವನ್ನು ಇಟ್ಟುಕೊಂಡು, ಯಾವುದೇ ಪರಿಸ್ಥಿತಿ ಬಂದರೂ ಅದನ್ನು ಮಾಡುವುದಿಲ್ಲ, ಪರಿಸ್ಥಿತಿಯನ್ನು ಎದುರಿಸುತ್ತೀರಿ ಏಕೆಂದರೆ ಇದನ್ನು ಮಾಡಬೇಕೆಂಬ ಗುರಿ ಇಟ್ಟುಕೊಂಡಿದ್ದೀರಿ. ಅದೇ ರೀತಿ ಬಾಪ್ ದಾದಾರ ಸಮಾನ ಸಂಸ್ಕಾರಗಳಿಲ್ಲದಿದ್ದರೆ ಅವುಗಳನ್ನು ಒಂದಿಷ್ಟೂ ಸ್ಪರ್ಶ ಮಾಡಬಾರದು ಎಂದು ತಿಳಿದುಕೊಳ್ಳಿ, ದೇಹ ಮತ್ತು ದೇಹದ ಸಂಬಂಧದ ಏಣಿಯನ್ನು ಏರಿರುವಿರಿ ಆದರೆ ಈಗ ಬುದ್ಧಿಯಲ್ಲಿಯೂ ಸಂಸ್ಕಾರ ಪ್ರಕಟವಾಗಬೇಕು. ಸಂಸ್ಕಾರದಂತೆ ಸ್ವರೂಪವಿರುವುದು, ಕೆಲವರ ಸಂಸ್ಕಾರಗಳು ಸರಳ, ಮಧುರವಾಗಿದ್ದರೆ ಆ ಸಂಸ್ಕಾರ ಸ್ವರೂಪದಲ್ಲಿ ಬರುತ್ತವೆ.

ನಿಮ್ಮೆಲ್ಲರ ಸಂಸ್ಕಾರಗಳು ಬಾಪ್ ದಾದಾರ ಸಮಾನವಾದಾಗ ಎಲ್ಲರಿಗೂ ಬಾಪ್ ದಾದಾರ ಸ್ವರೂಪ ಕಂಡುಬರುವುದು. ಬಾಪ್ ದಾದಾರವರಂತೆಯೇ ಗುಣ, ಕರ್ತವ್ಯ, ಮಾತು ಮತ್ತು ಸಂಕಲ್ಪಗಳಿರಬೇಕು, ಇವರು ಅವರಂತೆಯೇ ಇದ್ದಾರೆಂದು ಎಲ್ಲರ ಬಾಯಿಂದ ಬರುವುದು. ಮುಖ ಬೇರೆಯಾಗಿರಬಹುದು, ಆದರೆ ಗುಣಗಳು ಅವೇ ಆಗಿರುವವು. ಮುಖದಲ್ಲಿ ಗುಣಗಳು ಕಂಡು ಬರಬೇಕು. ಈಗ ಬಾಪ್ ದಾದಾ ಮಕ್ಕಳಿಂದ ಇದೇ ಭರವಸೆಗಳನ್ನು ಇಟ್ಟುಕೊಳ್ಳುತ್ತಾರೆ. ಎಲ್ಲಾರೂ ಸ್ನೇಹಿ ಸಫಲತೆಯ ನಕ್ಷತ್ರವಾಗಿದ್ದೀರಿ ಮತ್ತು ಪುರುಷಾರ್ಥಿ ನಕ್ಷತ್ರಗಳು. ಸೇವಾಧಾರಿ ಮಕ್ಕಳ ಪುರುಷಾರ್ಥ ಸಫಲತೆ ಸಹಿತವಾಗಿರುತ್ತದೆ. ನಿಮಿತ್ತವಾಗಿ ಪುರುಷಾರ್ಥ ಮಾಡುತ್ತಾರೆ ಆದರೆ ಸಫಲತೆ ಇದ್ದೇ ಇದೆ. ಈಗ ಏನು ಮಾಡಬೇಕೆಂದು ತಿಳಿಯಿತಲ್ಲವೇ? ಯಾವುದನ್ನು ಯೋಚಿಸುವಿರೋ, ಯಾವುದನ್ನು ಹೇಳುವಿರೋ, ಅದನ್ನೇ ಮಾಡಬೇಕು, ಯೋಚಿಸುತ್ತೇವೆ, ನೋಡುತ್ತೇವೆ ವಿಚಾರವಂತೂ ಈ ರೀತಿ ಇದೆ ಎಂದು ಹೇಳಿದಾಗ ಇನ್ನೂವರೆಗೆ ಈ ರೀತಿ ಏಕೆ ಎಂದು ಜನ ನಗುವರು. ಈಗ ಈ ಮಾತುಗಳು ವೃದ್ಧರು ಗೊಂಬೆಗಳ ಆಟವಾಡಿದರೆ ಹೇಗೆ ಅನ್ನಿಸುವುದು ಆ ರೀತಿ ಎನ್ನಿಸುವುದು. ಆದ್ದರಿಂದ ವೃದ್ಧರಾದರೂ ಒಮ್ಮೊಮ್ಮೆ ಬಾಲ್ಯದ ಆಟಗಳನ್ನು ಆಡಲು ಆರಂಭಿಸುತ್ತಾರೆಂದು ಸಹ ಮುಗುಳ್ನಗುತ್ತಾರೆ. ಬೊಂಬೆಗಳ ಆಟವೇನೆಂದು ಗೊತ್ತಿದೆಯಲ್ಲವೇ? ಇಡೀ ಜೀವನ ಅವರದನ್ನಾಗಿಸಿ, ಚಿಕ್ಕವರನ್ನು ದೊಡ್ಡವರನ್ನಾಗಿ ಮಾಡಿ ನಂತರ ಸ್ವಯಂವರವನ್ನೂ ಮಾಡುತ್ತಾರೆ. ಅದೇ ರೀತಿ ಮಕ್ಕಳೂ ಸಹ ಅನೇಕ ಮಾತುಗಳ ಸಂಕಲ್ಪಗಳನ್ನು ರಚನೆ ಮಾಡಿ ಅವುಗಳ ಪಾಲನೆ ಮಾಡಿ ಅವುಗಳನ್ನು ದೊಡ್ಡದನ್ನಾಗಿ ಮಾಡಿ ನಂತರ ಅದರಿಂದ ತಾವೇ ತೊಂದರೆಗೊಳಗಾಗುತ್ತಾರೆ. ಹಾಗಾದರೆ ಇದು ಬೊಂಬೆಗಳ ಆಟವಾಯಿತಲ್ಲವೇ? ನಂತರ ತಾವೇ ತಮ್ಮನ್ನು ನೋಡಿ ಆಶ್ಚರ್ಯ ಪಡುತ್ತಾರೆ. ಈಗ ಇಂತಹ ರಚನೆಯನ್ನು ರಚಿಸಬೇಡಿ. ಬಾಪ್ ದಾದಾ ವ್ಯರ್ಥ ರಚನೆಯನ್ನು ರಚಿಸುವುದಿಲ್ಲ ಮತ್ತು ಮಕ್ಕಳು ವ್ಯರ್ಥ ರಚನೆಯನ್ನು ರಚಿಸಿ ನಂತರ ಅದರಿಂದ ದೂರ ಹೋಗುವ ಮತ್ತು ಅದನ್ನು ನಾಶಗೊಳಿಸುವ ಪುರುಷಾರ್ಥ ಮಾಡುತ್ತಾರೆ. ಆದ್ದರಿಂದ ಇಂತಹ ರಚನೆಯನ್ನು ರಚಿಸಬಾರದು. ಒಂದು ಕ್ಷಣದಲ್ಲಿ ಶ್ರೇಷ್ಠ ರಚನೆಯನ್ನು ತೀವ್ರವಾಗಿ ರಚಿಸುತ್ತಾರೆ ಮತ್ತು ಉಲ್ಟಾ ರಚನೆಯೂ ಸಹ ಅಷ್ಟೇ ತೀವ್ರವಾಗಿರುತ್ತದೆ. ಒಂದು ಕ್ಷಣದಲ್ಲಿ ಎಷ್ಟು ಸಂಕಲ್ಪ ನಡೆಯುತ್ತವೆ. ರಚನೆಯನ್ನು ರಚಿಸಿ ಅದಕ್ಕೆ ಸಮಯ ಕೊಟ್ಟು ನಂತರ ಅದನ್ನು ಸಮಾಪ್ತಿಗೊಳಿಸಲು ಪ್ರಯತ್ನ ಮಾಡುವ ಅವಶ್ಯಕತೆಯಿದೆಯಾ? ಈಗ ಇಂತಹ ರಚನೆಗೆ ಕಡಿವಾಣ ಹಾಕಬೇಕು.

ಅವರು ಜನಸಂಖ್ಯೆಯ ನಿಯಂತ್ರಣ ಮಾಡುತ್ತಾರೆ. ಇದೂ ಸಂಕಲ್ಪಗಳ ಉತ್ಪತ್ತಿಯಾಗುತ್ತದೆ. ಇದೂ ಸಹ ಜನ್ಮವಾಗಿದೆ. ಅಲ್ಲಿ ಆ ಜನಸಂಖ್ಯೆ ಅತಿಯಾಗುತ್ತಿದೆ ಮತ್ತು ಇಲ್ಲಿ ಸಂಕಲ್ಪಗಳ ಸಂಖ್ಯೆ ಅತಿಯಾಗುತ್ತದೆ. ಈಗ ಇದನ್ನು ನಿಯಂತ್ರಣ ಮಾಡಬೇಕು. ಪುರುಷಾರ್ಥದ ದುರ್ಬಲತೆಯ ಕಾರಣ ಸಂಕಲ್ಪಗಳ ರಚನೆಯಾಗುತ್ತದೆ, ಆದ್ದರಿಂದ ಈಗ ಇದರ ಮೂಲ ಸಹಿತ ನಾಶ ಮಾಡಬೇಕು. ಹಳೆಯ ಮಾತುಗಳು, ಹಳೆಯ ಸಂಸ್ಕಾರಗಳು ಎಂದಿನದೋ ಹಳೆಯ ಮಾತುಗಳಂತೆ ಅನುಭವ ಆಗಬೇಕು. ಈ ರೀತಿ ಅದರ ನಾಮರೂಪಗಳು ನಾಶವಾಗಬೇಕು. ಈಗ ಭಾಷೆ ಬದಲಾಗಬೇಕು. ಅನೇಕರು ಇನ್ನೂವರೆಗೂ ಸಂಪೂರ್ಣತೆಯ ಸ್ಥಿತಿಯ ಮಾತನ್ನು ಆಡುತ್ತಿಲ್ಲ. ಆದ್ದರಿಂದ ಈಗಿನಿಂದಲೇ ಅದೇ ಸಂಕಲ್ಪಗಳನ್ನು, ಮಾತುಗಳನ್ನು, ಕರ್ಮಗಳನ್ನು ಮಾಡಬೇಕು. ಈ ಭಟ್ಟಿಯ ನಂತರ ಎಲ್ಲರ ಮುಖದಲ್ಲಿ ಸಂಪೂರ್ಣತೆಯ ಕಾಂತಿ ಕಂಡು ಬರಬೇಕು. ಈಗಿನಿಂದಲೇ ತಾವು ಯಾವಾಗ ಸಂಪೂರ್ಣತೆಯನ್ನು ಸಮೀಪ ತರುವಿರೋ ಆಗ ನಂಬರ್ ವಾರ್ ಮತ್ತು ಸಮೀಪ ತರುವಿರಿ. ಒಂದು ವೇಳೆ ತಾವು ಅಂತ್ಯದಲ್ಲಿ ತಂದರೆ ಬೇರೆಯವರು ಏನು ಮಾಡಬೇಕು? ಸಾಕಾರ ರೂಪದಲ್ಲಿ ಸಂಪೂರ್ಣತೆಯನ್ನು ಸಾಕಾರದಲ್ಲಿ ತಂದರು. ಸಂಪೂರ್ಣತೆ ಸಾಕಾರ ರೂಪದಲ್ಲಿ ಸಂಪನ್ನವಾದುದು ಕಂಡು ಬರುತ್ತಿತ್ತು. ಸಂಪೂರ್ಣ ಮತ್ತು ಸಾಕಾರ ಭಿನ್ನವಾಗಿ ಕಂಡು ಬರುತ್ತಿರಲಿಲ್ಲ. ಅದೇ ರೀತಿ ತಮ್ಮ ಸಾಕಾರ ಸ್ವರೂಪ ಬೇರೆಯಾಗಿ ಕಂಡು ಬರಬಾರದು, ಸಾಕಾರ ರೂಪದಲ್ಲಿ ಮುಖ್ಯವಾಗಿ ಯಾವ ಗುಣ ಸ್ಪಷ್ಟವಾಗಿ ಕಂಡುಬರುತ್ತಿತ್ತು? ಆ ಗುಣದಿಂದ ಸಂಪೂರ್ಣತೆ ಸಮೀಪ ಕಂಡುಬರುತ್ತಿತ್ತು. ಅದು ಯಾವ ಗುಣವಾಗಿತ್ತು? ಸಾಕಾರವಾಗಿದ್ದರೂ ಅವ್ಯಕ್ತ ಅನುಭವವಾಗುತ್ತದೆಯೆಂದು ಯಾವ ಗುಣವನ್ನು ನೋಡಿ ಎಲ್ಲರೂ ಹೇಳುತ್ತಿದ್ದರು ? (ಎಲ್ಲಾರೂ ತಮ್ಮದನ್ನು ಹೇಳಿದರು) ಎಲ್ಲಾ ಮಾತುಗಳ ರಹಸ್ಯ ಒಂದೇ ಆಗಿದೆ. ಆದರೆ ಈ ಸ್ಥಿತಿಗೆ ಹೇಳಲಾಗುತ್ತದೆ - ಉಪರಾಮ, ಉಪರಾಮ ಮತ್ತು ಸಾಕ್ಷಿ ದೃಷ್ಟಾ.

ಸಾಕ್ಷಿಯಾಗಿರುವವರ ಉದಾಹರಣೆ ಕೊಡಲಾಗುತ್ತದೆ. ಆದ್ದರಿಂದ ಸಾಕ್ಷಿ ದೃಷ್ಟಿಯ ಪ್ರಮಾಣ ಮತ್ತು ಉದಾಹರಣೆಯ ರೂಪವನ್ನು ಎದುರಿಗೆ ಇಟ್ಟುಕೊಳ್ಳಬೇಕು. ತಮ್ಮ ಬುದ್ಧಿಯಿಂದ, ಸಂಸ್ಕಾರಗಳಿಂದ ಉಪರಾಮ, ನನ್ನ ಸಂಸ್ಕಾರಗಳು ಎಂಬ (ನನ್ನದರಿಂದ) ಸಂಸ್ಕಾರಗಳಿಂದ ಉಪರಾಮ, ನಾನು ಇದನ್ನು ತಿಳಿದಿದ್ದೇನೆ, ಈ ನನ್ನತನದಿಂದ ಉಪರಾಮ, ನಾನು ಇದನ್ನು ತಿಳಿದಿದ್ದೇನೆ ಎಂದಲ್ಲ ಆದರೆ ಇದು ಬಾಪ್ ದಾದಾರ ಶ್ರೀಮತವಾಗಿದೆ. ಬುದ್ಧಿಯಲ್ಲಿ ಜ್ಞಾನ ತುಂಬಿದ ನಂತರ ನಾನು ಎಂಬ ಭಾವನೆ ಕೂಡ ಹಾನಿ ಮಾಡುತ್ತದೆ. ನಾನು ಶರೀರವಾಗಿದ್ದೇನೆ ಇದನ್ನು ಬಿಡಬೇಕು, ಮತ್ತು ನಾನು ತಿಳಿದಿದ್ದೇನೆ, ನಾನು ಜ್ಞಾನಿ ಆತ್ಮನಾಗಿದ್ದೇನೆ, ನಾನು ಬುದ್ಧಿವಂತನಾಗಿದ್ದೇನೆ ಈ ನನ್ನದನ್ನು ಬಿಡಬೇಕು. *ಎಲ್ಲಿ ನಾನು ಎಂಬ ಶಬ್ದ ಬರುತ್ತದೆಯೋ ಅಲ್ಲಿ ಬಾಪ್ ದಾದಾ ನೆನಪಿಗೆ ಬರಬೇಕು. ಎಲ್ಲಿ ನನ್ನ ಭಾವನೆ ಎಂಬುದು ಬರುತ್ತದೆಯೋ ಅಲ್ಲಿ ಶ್ರೀಮತ ನೆನಪಿಗೆ ಬರಬೇಕು. ನಾನು ಮತ್ತು ನನ್ನದನ್ನು ನಾಶಮಾಡಬೇಕು.* ಇವು ಕೂಡಾ ನಿಮ್ಮನ್ನು ಬೀಳಿಸುತ್ತದೆ. ಈ "ನಾನು ಮತ್ತು ನನ್ನದು" ಹಾಗೂ "ನೀನು ಮತ್ತು ನಿನ್ನದು" ಎಂಬವುಗಳನ್ನು ತೊಲಗಿಸಬೇಕು. ಈ ನಾಲ್ಕು ಶಬ್ದಗಳೇ ಸಂಪೂರ್ಣತೆಯಿಂದ ದೂರ ಮಾಡಿವೆ. ಈ ನಾಲ್ಕು ಶಬ್ದಗಳನ್ನು ಸಂಪೂರ್ಣ ತೊಲಗಿಸಬೇಕು. ಸಾಕಾರದಲ್ಲಿ ಅಂತಿಮ ಮಾತುಗಳನ್ನು ಕೇಳಿದ್ದೀರಾ, ಪ್ರತಿ ಮಾತಿನಲ್ಲೂ ಏನಿತ್ತು? ಬಾಬಾ, ಬಾಬಾ, ಸೇವೆಯಲ್ಲಿ ಸಫಲತೆ ಇರದಿರಲು ತಿದ್ದುಪಡಿ ಯಾವ ಮಾತಿನಲ್ಲಿತ್ತು? ಪ್ರತಿ ಮಾತಿನಲ್ಲೂ ಬಾಬಾ – ಬಾಬಾ ಎಂದು ಹೇಳಿ, ಆಗ ಬಾಣ ತಾಗುವುದು ಎಂದು ತಿಳಿಸುತ್ತಿದ್ದರು. ತಂದೆ ನೆನಪಿಗೆ ಬಂದಾಗ ನಾನು-ನನ್ನದು, ನೀನು-ನಿನ್ನದು ನಾಶವಾಗುವುದು, ಆಗ ಯಾವ ಸ್ಥಿತಿಯಾಗುವುದು? ಎಲ್ಲಾ ಮಾತುಗಳು ಸ್ಪಷ್ಟವಾಗಿ, ಶುದ್ಧ ನೆನಪಿನಲ್ಲಿ ಇರಬಹುದು.

ಈಗ ಬಿಂದು ರೂಪದಲ್ಲಿ ಸ್ಥಿತರಾಗಲು ಪರಿಶ್ರಮವೆನಿಸುತ್ತದೆ ಅಲ್ಲವೇ, ಏಕೆ? ಇಡೀ ದಿನದ ಸ್ಥಿತಿ ಸ್ಪಷ್ಟವಾಗಿರದ ಕಾರಣ ಶುದ್ಧವಾದ ನೆನಪು ಇರುವುದಿಲ್ಲ. ಅಲ್ಲಲ್ಲಿ ನಾನು - ನನ್ನದು, ನೀನು ನಿನ್ನದು ಬರುತ್ತದೆ. ಚಿನ್ನದ ಸಂಕೋಲೆಗಳು ಕಡಿಮೆಯೇನಲ್ಲ ಎಂದು ಆರಂಭದಲ್ಲಿಯೇ ಹೇಳಲಾಗಿತ್ತಲ್ಲವೇ? ಆ ಸಂಕೋಲೆಗಳು ತಮ್ಮೆಡೆಗೆ ಎಳೆಯುತ್ತವೆ. ಆದ್ದರಿಂದ ಪ್ರತಿಯೊಬ್ಬರೂ ಪೂರ್ಣತಃ ಅತೀತ ಬುದ್ಧಿ, ಪರಿಶುದ್ಧ ಬುದ್ಧಿ ಇದೆಯಾ ಎಂದು ತಮ್ಮನ್ನು ಪರೀಕ್ಷಿಸಿಕೊಳ್ಳಿ. ದಾರಿ ಸ್ಪಷ್ಟವಾಗಿದ್ದಾರೆ ತಲುಪಲು ಎಷ್ಟು ಸಮಯ ಬೇಕು? ಅದೇ ರಸ್ತೆಯಲ್ಲಿ ಅಡೆತಡೆಗಳಿದ್ದರೆ ತಲುಪಲು ಹೆಚ್ಚು ಸಮಯ ಬೇಕಾಗುತ್ತದೆ. ಅಡೆತಡೆಗಳಿದ್ದಾಗ ಪರಿಶುದ್ಧ ನೆನಪಿಗೆ ತೊಂದರೆಗಳಿವೆ. ಈಗ

ಇದನ್ನು ನಾಶಮಾಡಬೇಕು. ತಾವು ಮಾಡಿದಾಗ ತಮ್ಮನ್ನು ನೋಡಿ ಎಲ್ಲರೂ ಮಾಡುವರು. ನಂಬರ್ ವಾರ್ ಸ್ಥಿತಿಯನ್ನು ತಲುಪಬೇಕು. ತಾವು ತಲುಪಿದಾಗ ಬೇರೆಯವರೂ ತಲುಪುವರು, ಇಷ್ಟು ಜವಾಬ್ದಾರಿಯಿದೆ. ಸಂಕಲ್ಪದಲ್ಲಿ, ವಾಣಿಯಲ್ಲಿ, ಕರ್ಮದಲ್ಲಿ, ಸಂಬಂಧದಲ್ಲಿ ಅಥವಾ ಸೇವೆಯಲ್ಲಿ ಯಾವುದಾದರೂ ಹದ್ದಿನ ವಿಷಯ ಉಳಿದರೆ ಮಿತಿಗಳು ಬಂಧನಗಳಾಗುತ್ತವೆ. ಬೇಹದ್ದಿನ ಸ್ಥಿತಿಯಲ್ಲಿ ಇರುವುದರಿಂದಲೇ ಬೇಹದ್ದಿನ ರೂಪದಲ್ಲಿ ಸ್ಥಿತರಾಗುವಿರಿ. ಈಗಿರುವ ಕೊಳಚೆಯನ್ನು ನಾಶಮಾಡಲು ಈ ಭಟ್ಟಿಯಿದೆ. ಈಗ ಸಂಪೂರ್ಣತೆಯ ಮುದ್ರೆ ಹತ್ತಲಿದೆ. ಸಂಪೂರ್ಣ ಸ್ಥಿತಿ ವರ್ತಮಾನ ಸಮಯದಿಂದಲೇ ಇರುವುದು ಮಹಾರಥಿಗಳ ಕರ್ತವ್ಯ. ಈಗ ಮತ್ತೇನನ್ನು ಮಾಡಬೇಕು? ಯಾವ ಸ್ಕಾಲರ್ಷಿಪ್ ತೆಗೆದುಕೊಳ್ಳುವಿರಿ? ಇನ್ನು ಸ್ಕಾಲರ್ಷಿಪ್ ಪಡೆದುಕೊಳ್ಳುವವರ ಪ್ರತ್ಯಕ್ಷ ಸಾಕ್ಷಾತ್ಕಾರವಾಗುವುದು. ಬಾಪ್ ದಾದಾ ಗುಪ್ತರಾದರೆಂದು ನೀವು ಗುಪ್ತರಾಗಿರಬೇಕಾಗಿಲ್ಲ. ಮಕ್ಕಳು ಸ್ಟೇಜ್ ಮೇಲೆ ಪ್ರತ್ಯಕ್ಷವಾಗಬೇಕು.

ಮಕ್ಕಳ ಪ್ರತ್ಯಕ್ಷತೆಯೇ ಆಗಬೇಕು. ಸೇವೆಯ ಸ್ಟೇಜ್ ಮೇಲೆ ಸಹ ಪ್ರತ್ಯಕ್ಷ ಯಾರಾಗಿದ್ದಾರೆ? ಸಂಪೂರ್ಣತೆಯ ಪ್ರತ್ಯಕ್ಷತೆಯನ್ನು ಸಹ ಸ್ಟೇಜ್ ಮೇಲೆ ತರಬೇಕು. ಅಂತ್ಯದವರೆಗೂ ಗುಪ್ತವಾಗಿರುವೆವು ಎಂದು ತಿಳಿಯಬೇಡಿ. ಬಾಪ್ ದಾದಾರ ಪಾತ್ರ ಗುಪ್ತವಾಗಿದೆ, ಆದರೆ ಮಕ್ಕಳದಲ್ಲ. ಹಾಗಾದರೆ ಈಗ ಅದನ್ನು ಪ್ರತ್ಯಕ್ಷ ರೂಪದಲ್ಲಿ ತನ್ನಿ. ಈಗ ಯಾವ ಸೇವೆಯನ್ನು ಮಾಡಬೇಕು ಎಂದು ತಿಳಿಯಿತೇ? ಸಮ್ಮೇಳನಗಳನ್ನೂ ಮಾಡಿದಿರಿ, ಇದಷ್ಟೇ ಸೇವೆಯೇ? ಇದರ ಜೊತೆಜೊತೆಗೆ ಮತ್ತು ಶ್ರೇಷ್ಠವಾದ ಯಾವ ಸೇವೆ ಮಾಡಬೇಕು?.

ತಮ್ಮ ವೃತ್ತಿ ಮತ್ತು ದೃಷ್ಟಿಯನ್ನು ಬದಲಾಯಿಸುವ ಮುಖ್ಯ ಸೇವೆಯಿದೆ. ದೃಷ್ಟಿಯಿಂದ ಪರಿವರ್ತನೆ ಎಂಬ ಮಹಾನ್ ಗಾಯನವೇನಿದೆಯೋ, ಅದರಂತೆ ದೃಷ್ಟಿ ಮತ್ತು ವೃತ್ತಿಯ ಸೇವೆಯ ಪ್ರಯೋಗವನ್ನು ಮಾಡಬೇಕು. ಮಾತು ಒಂದು ಸಾಧನವಾಗಿದೆ ಆದರೆ ಯಾರನ್ನಾದರೂ ಸಂಪೂರ್ಣ ಸ್ನೇಹ ಮತ್ತು ಸಂಬಂಧದಲ್ಲಿ ತರಬೇಕಾದರೆ ವೃತ್ತಿ ಮತ್ತು ದೃಷ್ಟಿಯ ಸೇವೆಯಾಗಬೇಕು. ಒಂದು ಸ್ಥಾನದಲ್ಲಿ ಕುಳಿತು, ಒಂದೇ ಕ್ಷಣದಲ್ಲಿ ಅನೇಕರಿಗೆ ಈ ಸೇವೆಯನ್ನು ಮಾಡಬಹುದು. ಈ ಪ್ರತ್ಯಕ್ಷ ಪ್ರಮಾಣವನ್ನು ನೋಡುವೆವು. ಆರಂಭದಲ್ಲಿ ಹೇಗೆ ಮನೆಯಲ್ಲಿಯೇ ಸಾಕ್ಷಾತ್ಕಾರ ಆಯಿತೋ ಹಾಗೆ ಯಾರೋ ಅವರ ಕೈ ಹಿಡಿದು ತರುವಂತೆ ಈಗ ದೂರದಲ್ಲಿದ್ದೇ ತಮ್ಮ ಶಕ್ತಿಶಾಲಿ ವೃತ್ತಿ ಈ ಕಾರ್ಯವನ್ನು ಮಾಡುವುದು. ಎಂತಹ ನಾಸ್ತಿಕ, ತಮೋಗುಣಿ ಆತ್ಮ ಕೂಡಾ ಬದಲಾವಣೆ ಆದಂತೆ ಕಂಡು ಬರುವುದು. ಈಗ ಆ ಸೇವೆಯನ್ನು ಮಾಡಬೇಕು. ಆದರೆ ಈ ಸೇವೆ ವೃತ್ತಿ ಮತ್ತು ಮಾತಿನಲ್ಲಿ ಸ್ಪಷ್ಟತೆ ಇದ್ದಾಗ ಸಫಲತೆಯನ್ನು ಪಡೆಯುವುದು. ಪ್ರತಿಯೊಬ್ಬರೂ ತಮ್ಮ ಜವಾಬ್ದಾರಿಯನ್ನು ತಿಳಿದಿದ್ದೀರಿ. ಪ್ರತಿಯೊಬ್ಬರಿಗೂ ತಮ್ಮ ಸೇವೆ ಇದ್ದಾಗಲೂ ಯಜ್ಞದ ಜವಾಬ್ದಾರಿಯನ್ನು ತಮ್ಮ ಸೇವಾಕೇಂದ್ರದ ಜವಾಬ್ದಾರಿಯ ಸಮಾನ ತಿಳಿಯಬೇಕು. ಸ್ವಯಂ ಆಫರ್ ಮಾಡಿಕೊಳ್ಳಬೇಕು. ವಾಣಿಯ ಜೊತೆಜೊತೆಗೆ ವೃತ್ತಿ ಮತ್ತು ದೃಷ್ಟಿಯಲ್ಲಿ ಯಾರದೇ ಸಂಸ್ಕಾರಗಳನ್ನು ಬಹಳ ಕಡಿಮೆ ಸಮಯದಲ್ಲಿ ಬದಲಾವಣೆ ಮಾಡುವಷ್ಟು ಶಕ್ತಿಯಿದೆ. ವಾಣಿಯ ಜೊತೆಗೆ ವೃತ್ತಿ ಮತ್ತು ದೃಷ್ಟಿಯ ಹೊಂದಾಣಿಕೆಯಾಗದಿದ್ದರೆ ಸಫಲತೆಯಾಗುವುದೇ ಇಲ್ಲ. ಇದೇ ಸೇವೆ ಮುಖ್ಯವಾಗಿದೆ. ಈಗಿನಿಂದಲೇ ಬೇಹದ್ದಿನ ಸೇವೆಗೆ ಬೇಹದ್ದಿನ ಆತ್ಮರನ್ನು ಆಕರ್ಷಿಸಬೇಕು. ತಾವು ಪ್ರಜೆಗಳನ್ನು ಮಾಡುವಂತಹ ಯಾವ ಸೇವೆಯನ್ನು, ಸೇವೆಯೆಂದು ತಿಳಿಯುತ್ತೀರೋ, ಅದಂತೂ ತಮ್ಮ ಪ್ರಜೆಗಳಿಗೆ. ಪ್ರಜೆಗಳು ತಾವಾಗಿಯೇ ಪ್ರದರ್ಶನಿಗಳಿಂದ ತಯಾರಾಗುತ್ತಾರೆ. ಈಗಂತೂ ತಾವೆಲ್ಲರೂ ಬೇಹದ್ದಿನ ಸುಖವನ್ನು ಕೊಡಬೇಕು, ಆಗ ಇಡೀ ವಿಶ್ವ ತಮ್ಮನ್ನು ಸುಖದಾತಾ ಎಂದು ತಿಳಿಯುವರು. ವಿಶ್ವಮಹಾರಾಜನಿಗೆ ವಿಶ್ವದ ದಾತಾ ಎಂದು ಕರೆಯಲಾಗುತ್ತದೆ. ಈಗ ತಾವೂ ಸಹ ಎಲ್ಲರಿಗೂ ಸುಖವನ್ನು ಕೊಟ್ಟಾಗ ಎಲ್ಲರೂ ತಮ್ಮನ್ನು ಸುಖದಾತಾ ಎಂದು ಅಂಗೀಕರಿಸುತ್ತಾರೆ. ಸುಖ ಕೊಟ್ಟಾಗಲೇ ಅಂಗೀಕರಿಸುತ್ತಾರೆ. ಆದ್ದರಿಂದ ಮುಂದುವರೆಯಬೇಕು. ಒಂದು ಕ್ಷಣದಲ್ಲಿ ಅನೇಕರ ಸೇವೆಯನ್ನು ಮಾಡಬಹುದು. ಯಾವುದೇ ಮಾತಿನಲ್ಲಿ ನೊಂದುಕೊಳ್ಳುವುದು ಎಂದರೆ ಫೇಲಾದಂತೆ. (ಫೀಲ್ & ಫೇಲ್) ಅದು ನಂತರ ನಾಪಾಸನಲ್ಲಿ ಜಮಾ ಆಗುತ್ತದೆ. ಇತ್ತೀಚಿನ ಪರೀಕ್ಷೆಯ ಪದ್ಧತಿ' ಮೂರು-ಮೂರು ತಿಂಗಳಿಗೊಮ್ಮೆಯಿದೆ. ಅದಕ್ಕೆ ಫೇಲ್ ಅಥವಾ ಪಾಸ್ ನ ಅಂಕಗಳನ್ನು ಅಂತ್ಯದಲ್ಲಿ ಕೂಡಿಸುತ್ತಾರೆ. ಯಾರು

ಮತ್ತೆ ಮತ್ತೆ ಫೇಲಾಗುತ್ತಾರೋ ಅವರು ಅಂತ್ಯದಲ್ಲಿಯೂ ಫೇಲಾಗುತ್ತಾರೆ. ಆದ್ದರಿಂದ ಸಂಪೂರ್ಣ ಆವೇಶರಹಿತವಾಗಬೇಕು. ಈ ರೀತಿಯಾದಾಗ ಪೂರ್ಣ ಪಾಸಾಗಿದ್ದೀರಿ ಎಂದು ತಿಳಿಯಿರಿ, ಯಾವುದೇ ಕುಂದುಕೊರತೆಯಿದ್ದರೆ ಪೂರ್ಣ ಪಾಸಾಗಿಲ್ಲ ಎಂದು ತಿಳಿಯಿರಿ.

ಅವ್ಯಕ್ತ ಮುರಳಿ 26-03-1970.

***ಮಹಾರಥಿಯ ಗುಣ ಮತ್ತು ಲಕ್ಷಣಗಳು***

ಆತ್ಮಿಕ ಸ್ಥಿತಿಯಲ್ಲಿದ್ದು ಮನನ ಚಿಂತನೆ ಮಾಡಬೇಕಾಗಿರುವ ಸಂಕಲ್ಪಗಳು.

**ಆತ್ಮಿಕ ಸ್ಥಿತಿ/ಯೋಗ ಸ್ಥಿತಿ.**

ನಾನಾತ್ಮ ಪವಿತ್ರ ಸ್ವರೂಪ, ಶಿವ ಪರಮಾತ್ಮ ನನ್ನ ತಂದೆ.

1. ನಾನು ಅಭ್ಯಾಸ ಮತ್ತು ಪ್ರಯೋಗ ಎರಡನ್ನು ಜೊತೆಜೊತೆಯಾಗಿ ಮಾಡುವ ಮಹಾರಥಿ.

2. ನಾನು ಏನನ್ನು ಮಾಡಬೇಕು, ಏನು ಮಾಡಬಾರದು, ಏನು ಹೇಳಬೇಕು, ಹೇಳಬಾರದು ಎಂಬ ವಿಷಯವನ್ನು ಈಗಿನಿಂದಲೇ ಧಾರಣೆ ಮಾಡಿರುವ ಅಂತಿಮ ಸ್ವರೂಪದ ಸಾಕ್ಷಾತ್ಕಾರ ಮೂರ್ತಿ.

3. ನಾನು ಸಾಕಾರ ತಂದೆಯನ್ನು ಅನುಸರಿಸುತ್ತಾ ಅಭ್ಯಾಸ ಮತ್ತು ಪ್ರತ್ಯಕ್ಷತೆಯನ್ನು ಸಮಾನವಾಗಿ ಇಟ್ಟುಕೊಂಡಿದ್ದೇನೆ.

4. ನಾನು ಮನಸಾ, ವಾಚಾ, ಕರ್ಮಣಾ ಪ್ರತಿ ವಿಷಯದಲ್ಲಿ ನಿಶ್ಚಯ ಬುದ್ಧಿ ಇರುವ ಮಹಾರಥಿ.

5. ಮಧುವನದ ಮುಖ್ಯ ರತ್ನವಾದ ನನ್ನ ಮೇಲೆ ಇರುವ ಎಲ್ಲರ ದೃಷ್ಟಿಗೆ ನಾನು ಪರಿವರ್ತನೆಯಾಗಿರುವ ವಿಷಯಗಳು, ಸಾಕ್ಷಾತ್ ಸ್ವರೂಪ ಕಾಣಿಸಿದೆ.

6. ನನ್ನ ಹಳೆಯ ವೃತ್ತಿ, ಹಳೆಯ ದೃಷ್ಟಿಯನ್ನು ಸಮಾಪ್ತಿ ಮಾಡಿ ಅಂತಿಮ ನಗಾರಿಯನ್ನು ಮೊಳಗಿಸಿದ್ದೇನೆ.

7. ನಾನು ಪ್ರತಿಯೊಂದು ವಿಷಯದಲ್ಲಿ ಇದು ಬಾಪ್ ದಾದಾರವರ ಸಂಸ್ಕಾರವಾಗಿದೆಯೋ ಇಲ್ಲವೋ ಎಂದು ತುಲನೆ ಮಾಡಿ ಸಂಸ್ಕಾರಗಳ ಪರಿವರ್ತನೆಯನ್ನು ಮಾಡಿಕೊಂಡಿದ್ದೇನೆ.

8. ನಾನು ಬಾಪ್ ದಾದಾ ಹೇಗೆ ಇದ್ದರೋ ಅದೇ ಕರ್ತವ್ಯ, ಅವೇ ಮಾತು, ಅವೇ ಸಂಕಲ್ಪಗಳಿಂದ ಅವರ ಗುಣಗಳನ್ನು ಪ್ರತ್ಯಕ್ಷ ಮಾಡಿದ್ದೇನೆ.

9. ನಾನು ಸಫಲತೆಯೊಂದಿಗೆ ಪುರುಷಾರ್ಥವನ್ನು ಮಾಡಿರುವ ಈಶ್ವರೀಯ ಸೇವಾಧಾರಿ.

10. ನಾನು ವ್ಯರ್ಥ ಸಂಕಲ್ಪಗಳಿಗೆ ಪೂರ್ಣ ವಿರಾಮ ಹಾಕುವ ಮತ್ತು ವ್ಯರ್ಥಸಂಕಲ್ಪಗಳನ್ನು ನಿಯಂತ್ರಿಸಬಲ್ಲ ಸಂಪೂರ್ಣಸ್ವರೂಪ.

11. ನನ್ನ ಸಾಕಾರ ರೂಪ ಮತ್ತು ಸಂಪೂರ್ಣ ರೂಪ ಸಮಾನವಾಗಿಸಿಕೊಂಡು ಎಲ್ಲರಿಗೂ ಅವ್ಯಕ್ತ ಸ್ಥಿತಿಯ ಅನುಭವ ಮಾಡಿಸಿದ್ದೇನೆ.

12. ನಾನು ಉಪರಾಮ ಸ್ಥಿತಿ ಮತ್ತು ಸಾಕ್ಷಿದ್ರಷ್ಟ ಸ್ಥಿತಿಯನ್ನು ಧಾರಣೆ ಮಾಡಿರುವ ಉದಾಹರಣಾ ಸ್ವರೂಪ.

13. ನಾನು, ನನ್ನದು, ನೀನು, ನಿನ್ನದು ಎಂಬ ಈ ನಾಲ್ಕು ವಿಷಯಗಳನ್ನು ನಿವಾರಿಸಿಕೊಂಡು ಸಂಪೂರ್ಣವಾಗಿ ತಯಾರಾಗಿದ್ದೇನೆ.

14. ಎಲ್ಲಿ "ನಾನು" ಎಂಬ ಮಾತು ಬರುತ್ತದೆಯೋ ಅಲ್ಲಿ "ಬಾಪ್ ದಾದಾರವರ" ಸ್ಮೃತಿ ಮತ್ತು ಎಲ್ಲಿ "ನನ್ನ ಭಾವನೆ" ಎಂದು ಬರುತ್ತದೆಯೋ ಅಲ್ಲಿ "ಬಾಪ್ ದಾದಾರವರ ಶ್ರೀಮತವನ್ನು" ಸ್ಮೃತಿ (ನೆನಪು) ಮಾಡುತ್ತಿದ್ದೇನೆ.

15. ನಾನು ಸ್ವಚ್ಛವಾದ ಸ್ಮೃತಿಯಿಂದ ಸೇವೆಯಲ್ಲಿ ಸಫಲತೆಯನ್ನು ಪಡೆದಿದ್ದೇನೆ.

16. ನಾನು ದಿನವಿಡೀ ಸ್ಥಿತಿಯನ್ನು ಸ್ವಚ್ಛವಾಗಿಟ್ಟುಕೊಂಡು, ಸತ್ಯವಾದ ಸ್ಮೃತಿಯಿಂದ ಬಿಂದುರೂಪಸ್ಥಿತಿಯಲ್ಲಿ ಸೇವೆಯನ್ನು ಮಾಡಿ ಸಫಲತೆಯನ್ನು ಪಡೆದಿದ್ದೇನೆ.

17. ನಾನು ಸಂಕಲ್ಪ, ವಾಣಿ, ಕರ್ಮ, ಸಂಬಂಧದಲ್ಲಿ, ಸೇವೆಯಲ್ಲಿ ಹದ್ದಿನ ಬಂಧನವನ್ನು ತೊಲಗಿಸಿಕೊಂಡಿರುವ ಬೇಹದ್ ಸ್ಮೃತಿ ಸ್ವರೂಪ.

18. ನಾನು ಸಂಪೂರ್ಣತೆಯ ಮುದ್ರೆಯನ್ನು ಹಾಕಿಸಿಕೊಂಡು ಬಾಪ್ ದಾದಾರವರಿಂದ ಸ್ಕಾಲರ್ಷಿಪ್ ತೆಗೆದುಕೊಂಡ ಪ್ರತ್ಯಕ್ಷ ಸಾಕ್ಷಾತ್ಕಾರ ಮೂರ್ತಿ.

19. ನನ್ನ ವೃತ್ತಿ ಮತ್ತು ದೃಷ್ಟಿಯಿಂದ ಸಂಪೂರ್ಣ ಸ್ನೇಹವನ್ನು ಕೊಟ್ಟು ಎಲ್ಲರನ್ನೂ ತಂದೆಯ ಸಂಬಂಧದಲ್ಲಿ ತಂದಿದ್ದೇನೆ.

20. ನಾನು ಎಲ್ಲಾ ವಿಷಯಗಳಿಂದ ಮುಕ್ತವಾಗಿ, ಸ್ಪಷ್ಟವಾಗಿರುತ್ತಾ ಶಕ್ತಿಶಾಲಿ ವೃತ್ತಿ ಮತ್ತು ದೃಷ್ಟಿಯಿಂದ ಒಂದೇ ಸ್ಥಾನದಲ್ಲಿದ್ದು, ಒಂದೇ ಕ್ಷಣದಲ್ಲಿ ಎಲ್ಲರಿಗೂ "ಯಾರೋ ಕೈಯನ್ನು ಹಿಡಿದುಕೊಂಡು ಹೋಗುತ್ತಿದ್ದಾರೆ" ಎಂಬ ಅನುಭವವನ್ನು ಮಾಡಿಸಿದ್ದೇನೆ.

21. ನನ್ನ ವಾಣಿ, ವೃತ್ತಿ ಮತ್ತು ದೃಷ್ಟಿಯಿಂದ ಎಲ್ಲರ ಸಂಸ್ಕಾರಗಳನ್ನು ಕ್ಷಣದಲ್ಲಿ ಬದಲಾಯಿಸಿದ್ದೇನೆ.

22. ನಾನು ವಿಶ್ವವೆಲ್ಲಾ ಬೇಹದ್ ಸುಖವನ್ನು ಕೊಡುವ ವಿಶ್ವ ಮಹಾರಾಜನು ಮತ್ತು ವಿಶ್ವದಾತನಾಗಿದ್ದೇನೆ.

23. ನಾನು ಯಾವ ವಿಷಯದಲ್ಲಾದರೂ ಪಾಸಾಗಿ ಅಂತಿಮದಲ್ಲಿ ಮೊದಲ ನಂಬರ್ ತೆಗೆದುಕೊಂಡಿದ್ದೇನೆ. (ಫೀಲ್ ಆದರೆ ಫೇಲ್ ಆದ ಹಾಗೆ)